<u>3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.47/2023</u>

ದಿಃ 27.09.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

CW-24 PW-1

ಹೆಸರು : ಅನಿಲ್ ಕುಮಾರ್ ವಿ
ತಂದೆಯ ಹೆಸರು : ಲೇಟ್ ವೆಂಕಟರಾಜು
ವಯಸ್ಸು : 49 ವರ್ಷ
ಉದ್ಯೋಗ : ಡಿ ವೈ ಎಸ್ ಪಿ, Traffic and Road Safety, Bangalore.
ವಾಸಸ್ಥಳ : ಬೆಂಗಳೂರು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಮೇ 2008 ರಿಂದ ನವೆಂಬರ್ 2010 ರವರೆಗೂ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ08.08.2010 ರಂದು ನಾನು ಠಾಣೆಯಲ್ಲಿದ್ದಾಗ ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಚಂದ್ರಶೇಖರ್ ಎಂಬಾತ ಠಾಣೆಗೆ ಹಾಜರಾಗಿ ನೀಡಿದಂತಹ ಲಿಖಿತ ದೂರನ್ನು ಸ್ವೀಕರಿಸಿ ಗುನ್ನೆ ದಾಖಲಿಸಿಕೊಂಡೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ 1** ಎಂದು ಹಾಗೂ ಅದನ್ನು ಸ್ವೀಕರಿಸುವ ಸಲುವಾಗಿ ಸಾಕ್ಷಿಯ ಸಹಿಯನ್ನು **ನಿಪಿ1(ಎ)** ಎಂದು ಗುರುತಿಸಲಾಯಿತು. ಸದರಿ ದೂರಿನನ್ವಯ ಗುನ್ನೆ ಸಂಖ್ಯೆ 363/10 ನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ಮಾಹಿತಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರಥಮ ವರ್ತಮಾನ ಮಾಹಿತಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ2(ಎ)** ಎಂದು ಗುರುತಿಸಲಾಯಿತು.

3. ಅದೇ ದಿನ ಬೆಳಿಗ್ಗೆ 9.30ರ ಸಮಯದಲ್ಲಿ ಫಿರ್ಯಾದಿ ತೋರಿಸಿದ ಸ್ಥಳವಾದ ಹೊನಗನಹಟ್ಟಿ ಗ್ರಾಮದ ಬೆಂಗಳೂರು ಮಾಗಡಿ ರಸ್ತೆ ಶ್ರೀನಿಧಿ ಬ್ರಿಕ್ಸ್ ಫ್ಯಾಕ್ಟರಿಯ ಪ್ರವೇಶದ ಮಣ್ಣಿನ ರಸ್ತೆಯಲ್ಲಿ ಸಾಕ್ಷಿದಾರರಾದ ಚಾಸಾ 2 ಹನುಮಂತ ಹಾಗೂ ಚಾಸಾ 3 ಮಹದೇವಯ್ಯ ರವರ ಸಮಕ್ಷಮ ಬೆಳಿಗ್ಗೆ 9.30 ರಿಂದ 10.15ರ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಲಾಗಿದೆ. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ3** ಎಂದು ಹಾಗೂ ಸಾಕ್ಷಿ ಗುರುತಿಸಿರುವಂತಹ ತನ್ನ ಸಹಿಯನ್ನು **ನಿಪಿ3(ಎ)** ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಮೃತ ನಾಗರಾಜುರವರ ಮೃತ ದೇಹದ ಛಾಯಾ ಚಿತ್ರಗಳನ್ನು ತೆಗೆಸಿ ಮೃತ ದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಸಾಗಿಸಿರುತ್ತೇನೆ. ಸದರಿ ಮೂರು ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದುದ ಅದನ್ನು **ನಿಪಿ 4 ರಿಂದ 6** ಎಂದು ಗುರುತಿಸಲಾಯಿತು. ಮೃತ ದೇಹದಿದಿಂದ ಹರಿದ ರಕ್ತ ಮಣ್ಣಿ ಮೇಲೆ ಬಿದ್ದಿದ್ದು ರಕ್ತ ಮಿಶ್ರಿತ ಮಣ್ಣು ಹಾಗೂ ಮಾದರಿ ಮಣ್ಣನ್ನು ಸ್ಥಳದಲ್ಲಿ ಪಡೆದು ಅವುಗಳನ್ನು ಎರಡು ಪ್ರತ್ಯೇಕ ಪ್ಲಾಸ್ಟಿಕ್ ಡಬ್ಬದಲ್ಲಿ ಶೇಖರಿಸಿ ಬಿಳಿಯ ಬಟ್ಟೆಯಿಂದ ಸುತ್ತಿ ಎಂ ಎಂಬ ಅಕ್ಷರದಿಂದ ಮೊಹರು ಮಾಡಿ ಸೀಲ್ ಮಾಡಿ ವಶಕ್ಕೆ ಪಡೆದುಕೊಳ್ಳಲಾಗಿದೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಮೊಹರು ಮಾಡಿದಂತಹ ಎರಡು ಡಬ್ಬವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಬಟ್ಟೆಯನ್ನು ಹರಿದು ನೋಡಲಾಗಿ ಬಟ್ಟೆಯ ಪೊಟ್ಟಣದಲ್ಲಿರುವಂತಹ ರಕ್ತ ಮಿಶ್ರಿತ ಮಣ್ಣು ಹಾಗೂ ಮಾದರಿ ಮಣ್ಣಿನ ಪೊಟ್ಟಣವನ್ನು **ಎಂ.ಓ 1 ಮತ್ತು 2** ಎಂದು ಗುರುತಿಸಲಾಯಿತು. ಅವುಗಳನ್ನು ಮಾಲು ಪಟ್ಟಿ ಸಂಖ್ಯೆ 136/2010 ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ರಾಜರಾಜೇಶ್ವರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತ ನಾಗರಾಜು ರವರ ಶವ ಪಂಚಾನಾಮೆಯನ್ನು ಸಾಕ್ಷಿದಾರರಾದ ಚಾಸಾ 5 ರಿಂದ 7 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 12.30 ರ ಸಮಯದಲ್ಲಿ ಜರುಗಿಸಲಾಗಿದೆ. ಸದರಿ ಶವ

ತನಿಖಾ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ 7** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ7(ಎ)** ಎಂದು ಗುರುತಿಸಲಾಯಿತು. ಮೃತನ ಶವ ಪರೀಕ್ಷೆಗಾಗಿ ಆರ್ ಆರ್ ಆಸ್ಪತ್ರೆಯ ವೈದ್ಯರಿಗೆ ಮನವಿ ಮಾಡಿಕೊಂಡೆ. ಶವ ಪರೀಕ್ಷೆ ನಂತರ ಶವವನ್ನು ಮೃತನ ವಾರಸುದಾರರಿಗೆ ಒಪ್ಪಿಸಲಾಗಿದೆ. ದಿನಾಂಕಃ 09.08.2010 ರಂದು ಫಿರ್ಯಾದಿಯ ಮುಂದುವರೆದ ಹೇಳಿಕೆಯನ್ನು ದಾಖಲು ಮಾಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಸೋಮಶೇಖರ್ ರವರ ಹೇಳಿಕೆಯನ್ನು ಸಹ ದಾಖಲು ಮಾಡಿ ಕೊಂಡಿರುತ್ತೇನೆ. ಅದೇ ದಿನ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 25 ರವರಿಗೆ ವಹಿಸಿರುತ್ತೇನೆ. ದಿದಿನಾಂಕಃ 18.08.2010 ರಂದು ಈ ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡುವ ಸಲುವಾಗಿ ಮೃತ ನಾಗರಾಜುರವರಿಂದ ಕಿತ್ತುಕೊಂಡು ಹೋಗಿದ್ದ ನೋಕಿಯಾ ಮೊಬೈಲ್ 1661 ಮಾಡೆಲ್ ಗೆ 8904640749 ಸಿಮ್ ಕಾರ್ಡನ್ನು ಅಳವಡಿಸಿಕೊಂಡು ಉಪಯೋಗಿಸುತ್ತಿರುವ ವ್ಯಕ್ತಿಯನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಸಿಪಿಐ ಮಾಗಡಿ ಅವರು ನಿರ್ದೇಶಿಸಿದ್ದು ಅದರಂತೆ ಅದೇ ನಾನು ಮತ್ತು ಚಾಸಾ 21 ರಿಂದ 23 ರವರು ಸದರಿ ಮೊಬೈಲ್ ಅನ್ನು ಉಪಯೋಗಿಸುತ್ತಿದ್ದಂತಹ ವ್ಯಕ್ತಿಯನ್ನು ಪತ್ತೆ ಮಾಡಿದ್ದು ಆತ ಈ ಪ್ರಕರಣದ 3ನೇ ಆರೋಪಿಯಾದ ವಿಜಯ್ ಕುಮಾರ್ ಆಗಿದ್ದು ಸಿಪಿಐ ಮಾಗಡಿ ಅವರ ಮುಂದೆ ವರದಿಯೊಂದಿಗೆ ಅದೇ ದಿನ ಹಾಜರುಪಡಿಸಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ 8** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ 8(ಎ)** ಎಂದು ಗುರುತಿಸಲಾಯಿತು. 3ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ನ್ಯಾಯಾಲಯದ ಮುಂದೆ ಇರುತ್ತಾನೆ.

**<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಟಿ ಜಿ ವಕೀಲರಿಂದ ಃ</u>**

4. ಫಿರ್ಯಾದುದಾರ ತನ್ನ ದೂರಿನಲ್ಲಿ ತನ್ನ ತಂದೆ ಇತಂಹ ಮೊಬೈಲ್ ಮತ್ತು ಇಂತಹ ಸಂಖ್ಯೆಯ ಸಿಮ್ ಕಾರ್ಡನ್ನು ಉಪಯೋಗಿಸುತ್ತಿದ್ದರು ಎಂದು ತನ್ನ ದೂರಿನಲ್ಲಿ ಮತ್ತು ಮರು ಹೇಳಿಕೆಯಲ್ಲಿ ಹೇಳಿಕೊಂಡಿಲ್ಲ ಅಂದರೆ ಸರಿಯಲ್ಲ. ಮೊಬೈಲ್ ಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಅಂದರೆ ಸಾಕ್ಷಿ ನನ್ನ ಸಮಕ್ಷಮ ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ಮೃತ ವ್ಯಕ್ತಿಗೆ ಕುಡಿಯುವ ಚಟವಿದ್ದು ಆತ ಕುಡಿತದ ಅಮಲಿನಲ್ಲಿ ಬಿದ್ದು ಏಟಾಗಿ ಮರಣ ಹೊಂದಿರುತ್ತಾನೆಂದರೆ ಸರಿಯಲ್ಲ. ಮಹಜರ್ ಸಾಕ್ಷಿದಾರರಿಗೆ ನೋಟೀಸ್ ಕೊಟ್ಟು ಕರೆಸಿಲ್ಲ ಅಂದರೆ ಸರಿ. ಮಹಜರ್ ನ್ನು ಠಾಣೆಯಲ್ಲೇ ಸೃಷ್ಟನೆ ಮಾಡಲಾಗಿದೆ ಅಂದರೆ ಸರಿಯಲ್ಲ. 3ನೇ ಆರೋಪಿಗೆ ಸಂಬಂಧಿಸಿದಂತೆ ಆತನ ಭಾವ ಚಿತ್ರ ಅಥವಾ ರೇಖಾ ಚಿತ್ರವನ್ನು ನಮ್ಮ ಮೇಲಾಧಿಕಾರಿಗಳು ಕೊಟ್ಟಿಲ್ಲ ಅಂದರೆ ಸರಿ. ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಅಲ್ಲಿ ರಕ್ತ ಮಿಶ್ರಿತ ಮಣ್ಣನ್ನು ಹಾಗೂ ಮಾದರಿ ಮಣ್ಣನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ನಿಪಿ 8 ರಿಂದ 10 ಫೊಟೋದಲ್ಲಿ ಫೋಟೋ ತೆಗೆದ ದಿನಾಂಕ ಮತ್ತು ಸಮಯ ಕಂಡು ಬರುವುದಿಲ್ಲ ಅಂದರೆ ಸರಿ. ಫಿರ್ಯಾದುದಾರನ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಮೊಬೈಲ್ ಸಿಮ್ ಗೆ ಸಂಬಂಧಿಸಿದಂತಹ ದಾಖಲಾತಿಯನ್ನು ನಾನು ಪಡೆದುಕೊಂಡಿರುವುದಿಲ್ಲ. 3ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಂಬಧವಿಲ್ಲದೇ ಇದ್ದರೂ ಸಹ ಆತನನ್ನು ವಿನಾ ಕಾರಣ ಬಂಧನಕ್ಕೆ ಒಳಪಡಿಸಲಾಗಿದೆ ಅಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಗಳಿಗೂ ಯಾವುದೇ ಸಂಬಂಧವಿಲ್ಲ, ದಾಖಲಾತಿಗಳನ್ನು ಸೃಷ್ಟಿಸಲಾಗಿದೆ ಅಂದರೆ ಸರಿಯಲ್ಲ. ಸೃಷ್ಟನೆಯ ದಾಖಲಾತಿಗಳಿಗೆ ಅನುಗುಣವಾಗಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.